## ಅಕ್ಕ ಮನೆಯಲ್ಲಿಲ್ಲ



ನಾವೆಲ್ಲಾ ಕಾಫಿ–ತಿಂಡಿಗಾಗಿ ನಮ್ಮ ಆಫೀಸಿನ ಶೀಘ್ರಲಿಪಿಗಾರ್ತಿ ಮಂಜುಳಾ ಅವರನ್ನು ಆಗಾಗ್ಗೆ ಪೀಡಿಸುತ್ತಿದ್ದೆವು. ಒಮ್ಮೆ ನಾವೆಲ್ಲಾ ಸಂಜೆ ಕಾಫಿಗೆ ಅವರ ಮನೆಗೆ ಬರುತ್ತೇವೆ ಎಂದು ಹೇಳಿದೆವು. 'ಆಯಿತು ಬನ್ನಿ' ಎಂದರು. ಸಂಜೆ ಆರು ಗಂಟೆಯ ಸುಮಾರಿಗೆ ಮನೆಯ ಹತ್ತಿರ ಹೋದಾಗ ಅವರ ಮನೆಯ ಬಾಗಿಲು ಹಾಕಿತ್ತು. ಆದರೆ ಅವರ ಅಕ್ಕನ ಮಗಳು ಅನಿತಾ ಕಿಟಕಿಯಿಂದಲೇ ನಮ್ಮನ್ನು ನೋಡಿ, 'ಅಕ್ಕ, ನಿಮ್ಮ ಆಫೀಸಿನವರು ಬಂದ್ರು, ನೀನು ಇಲ್ಲ ಅಂತ ಹೇಳಿ ಕಳಿಸಲಾ?' ಎಂದಳು. ಆರು ವರ್ಷದ ಹುಡುಗಿ ಅನಿತಾ ತುಂಬಾ ಚೂಟಿ. ಅವಳಿಗೆ ನಮ್ಮೆಲ್ಲರ ಪರಿಚಯವಿತ್ತು. 'ನಮ್ಮ ಆಫೀಸಿನವರು ಬಂದರೆ ನಾನು ಮನೆಯಲ್ಲಿ ಇಲ್ಲ ಅಂತ ಹೇಳು' ಎಂದು ಅವಳಿಗೆ ಬಾಯಿಪಾಠ ಮಾಡಿಸಿದ್ದ ಮಂಜುಳಾ, ಸಿಟ್ಟಿನಿಂದ ಅನಿತಾಳ ತಲೆಗೆ ಮೊಟಕಿ, ಬಾಗಿಲು ತೆರೆದಳು...

**ಚಲುವನಹಳ್ಳಿ ರಾಜಶೇಖರ್**

## ಬೆಲ್ ಮಾಡಿದೆ...

ಮನೆಯ ಕಾಲಿಂಗ್ ಬೆಲ್ ಕೆಟ್ಟಿತ್ತು. ಸಮೀಪದ ಎಲೆಕ್ಟ್ರಿಕಲ್ ಅಂಗಡಿಗೆ ಹೋಗಿ ಬೆಲ್ ರಿಪೇರಿಗೆ ಹುಡುಗನನ್ನು ಕಳಿಸಿ ಎಂದು ಹೇಳಿ ಬಂದಿದ್ದೆ. ಎರಡು ದಿನಗಳಾದರೂ ಹುಡುಗ ಬರಲೇ ಇಲ್ಲ. ಮತ್ತೊಮ್ಮೆ ನೆನಪಿಸೋಣ ಎಂದು ಅಂಗಡಿಗೆ ಹೋದೆ. 'ನೋಡಿ, ನಿಮ್ಮ ಹುಡುಗ ಬರಲೇ ಇಲ್ಲ' ಎಂದು ದೂರಿದೆ. ಅವರು, 'ಯಾಕಪ್ಪ? ನಿನ್ನೆ ಸಾಹೇಬರ ಮನೆ ಬೆಲ್ ರಿಪೇರಿಗೆ ಹೋಗಲಿಲ್ಲ ನೀನು?' ಎಂದು ಕೇಳಿದರು. 'ಹೋಗಿದ್ದೆ ಸಾರ್, ಎರಡು ಮೂರು ಸಲ ಬೆಲ್ ಮಾಡಿದರೂ ಯಾರೂ ಬಾಗಿಲ ತೆರೆಯಲೇ ಇಲ್ಲ' ಎಂದ ಹುಡುಗ!

**ಸುರೇಶ ಹೆಗಡೆ**




ಕಲೆ: ಗಣೇಶ ಆಚಾರ್ಯ